C.C. 454/2022

DW-1

**Witness duly sworn on** 28.10.2025.

**Further Examination in chief by Sri. MAN Advocate**:

I have produced the certificate issued by Mundgod Daivajnya Co-operative Credit Society Ltd and it is marked as **Ex.D1**. I have produced the certificate issued by SBI Bank Mundgod Branch dated 29.07.2025 and it is marked as **Ex.D2**. I have produced statement of my Loan account at Saint Milagries Society for period 04.08.2021 to 28.07.2025 and it is marked as **Ex.D3**. I have produced certified copy of the Mortgage Deed dated 13.05.2019 along with the letter addressed by Mundgod Daivajnya Co-operative Credit Society Ltd to Sub-Registrar Mundgod and they are collectively marked as **Ex.D4**. I have produced office copy of the reply given by me through my counsel dated 08.09.2022 along with the postal receipt and postal acknowledgment and they are respectively marked as **Ex.D5 to Ex.D7**.

**ಹೆಚ್ಚುವರಿ ಸಾಕ್ಷ್ಯದ ಮೇಲೆ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪಿರ್ಯಾದಿ ಪರ ವಕೀಲರಿಂದಃ**

ನಾನು ಒಟ್ಟು 5-6 ದಾಖಲಾತಿಗಳನ್ನು ಹಾಜರುಮಾಡಿದ್ದೇನೆ. ಸದರಿ ದಾಖಲಾತಿಗಳು ನನ್ನ ಸಾಲಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳಾಗಿರುತ್ತವೆ. ನನ್ನ ಸಾಲಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳಾಗಿರುವುದರಿಂದ, ಅವುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳು ಆಗಿರುವುದಿಲ್ಲ ಎಂದರೆ, ಸಾಕ್ಷಿಯು ಅವುಗಳು ನನ್ನ ಮತ್ತು ಶಂಭುಲಿಂಗಯ್ಯರವರ ಸಾಲಕ್ಕೆ ಸಂಬಂಧಪಟ್ಟಂತಹ ದಾಖಲಾತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನಾನು ಸೆಂಟ್ ಮಿಲಾಗ್ರೀಸ್ ಸೊಸೈಟಿ ಮತ್ತು ಎಸ್.ಬಿ.ಐ ಬ್ಯಾಂಕಿನಲ್ಲಿ ಸಾಲವನ್ನು ಪಡೆದಿರುತ್ತೇನೆ. ಹೀಗೆ ಸೆಂಟ್ ಮಿಲಾಗ್ರೀಸ್ ಸೊಸೈಟಿ ಮತ್ತು ಎಸ್.ಬಿ.ಐ ಬ್ಯಾಂಕಿನಲ್ಲಿ ಪಡೆದುಕೊಂಡ ಸಾಲಗಳು ನನ್ನ ವೈಯಕ್ತಿಕ ವ್ಯವಹಾರಕ್ಕೆ ಸಂಬಂಧಿಸಿದ್ದಾಗಿರುತ್ತವೆ ಎಂದರೆ ಹೌದು. ಆದ ಕಾರಣ, ನಾನು ಈ ದಿನ ಹಾಜರುಪಡಿಸಿದ ದಾಖಲಾತಿಗಳಿಗೆ ಮತ್ತು ಈ ಪ್ರಕರಣದ ವಸ್ತುವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳ ವಸ್ತುವಿಷಯವೇ ಬೇರೆ ಈ ಪ್ರಕರಣದ ವಸ್ತುವಿಷಯವೇ ಬೇರೆ ಎಂದರೆ, ಅವು ಪರಸ್ಪರ ಒಂದಕ್ಕೊಂದು ಸಂಬಂಧ ಇದೆ

ಎಂದು ನುಡಿಯುತ್ತಾರೆ. 3 ಪ್ರಕರಣಗಳು ಕೂಡಿ ಒಟ್ಟು 11,00,000/- ಮೊತ್ತಕ್ಕೆ ದಾಖಲು ಮಾಡಿರುತ್ತಾರೆ. ಈ ಪ್ರಕರಣವು ಎಷ್ಟು ಲಕ್ಷ ಮೊತ್ತದ ಚೆಕ್ ಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ, ಸಾಕ್ಷಿಯು ನಿವೇದಿತಾರವರು 3 ಲಕ್ಷ ಮತ್ತು 5 ಲಕ್ಷ ಚೆಕ್ ಗಳಿಗೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ರೇಣುಕಾ ಶಂಭುಲಿಂಗಯ್ಯ ಬಾಳಿಗಟ್ಟಿಮಠ ಎಂದು ಇದೆ ಎಂದರೆ ಹೌದು. ಆದ ಕಾರಣ, ಈ ಪ್ರಕರಣಕ್ಕೂ ಮತ್ತು ನಿಡಿ.1 ಕ್ಕೂ ಸಂಬಂಧ ಇಲ್ಲ ಎಂದರೆ, ಸಂಬಂಧ ಇದೆ. ನಿಡಿ.1 ರಲ್ಲಿ ಅವರ ಹೆಸರಿನಲ್ಲಿ ಯಾವುದೇ ಸಾಲದ ಖಾತೆ ಇಲ್ಲ ಎಂದು ನಮೂದಾಗಿದೆ ಎಂದರೆ ಹೌದು. ನಿಡಿ.4 ಜೇರಾಕ್ಸ ಪ್ರತಿ ಎಂದರೆ, ಧೃಢೀಕೃತ ಪ್ರತಿ ಎಂದು ನುಡಿಯುತ್ತಾರೆ. ನಿಡಿ.5 ರಲ್ಲಿ ಇರುವ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ , ಸಾಕ್ಷಿಯು ಈ ಪ್ರಕರಣಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.5 ರಲ್ಲಿ ನಮೂದಿಸಿದ ವಿಷಯ ಈ ಪ್ರಕರಣಕ್ಕೆ ಬಂದಾಯಿಸುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕಃ 03.10.2025 ರಂದು ನಾನು ನ್ಯಾಯಾಲಯಕ್ಕೆ ಹಾಜರಾಗದೇ ನನ್ನ ವಕೀಲರ ಮುಖಾಂತರ ಸುಳ್ಳು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ, ಗೈರು ಹಾಜರಾಗಿ ಉಳಿದು, ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಿಂದ ನಾನು ಹೇಗಾದರು ಮಾಡಿ ತಪ್ಪಿಸಿಕೊಳ್ಳಬೇಕೆಂದು ಬ್ಯಾಂಕಿನ ವ್ಯವಸ್ಥಾಪಕರೊಂದಿಗೆ ಮಿಲಾಪೆಯಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟನೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಳ್ಳುವ ಸಲುವಾಗಿ, ಸಾಕಷ್ಟು ವಾಯಿದಿಯನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆಯ ಕಾಲಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ತದನಂತರ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಈಗ ನಮ್ಮ ವಕೀಲರ ಮುಖಾಂತರ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯನ್ನು ನುಡಿಯುವ ಪೂರ್ವದಲ್ಲಿ ಸದರಿ ದಾಖಲಾತಿಗಳು ನನ್ನ ಬಳಿ ಲಭ್ಯವಿರುತ್ತಿದ್ದವು ಎಂದರೆ ಸರಿ. ನಿಡಿ.1 ರಿಂದ 7 ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡ ದಾಖಲಾತಿಗಳು ಎಂದು ಮೇಲ್ನೂಟಕ್ಕೆ ಕಂಡುಬರುತ್ತವೆ ಎಂದರೆ ಸುಳ್ಳು. ಸುಳ್ಳು ದಾಖಲಾತಿಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**